**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 677/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | | ಗಜೇಂದ್ರ | ಪ್ರಾಸಾಃ 1 |
| ತಂದೆಯ/ಗಂಡನ ಹೆಸರು | | ಮಾದಶೆಟ್ಟಿ | ಚಾಸಾಃ 3 |
| ವಯಸ್ಸು | | 33 ವರ್ಷ | |
| ಕೆಲಸ | | ಗಾರೆ ಕೆಲಸ | ಸಾ ಪ್ರ ಬೋ |
| ವಾಸ | | ತರದಲೆ ಗ್ರಾಮ | ದಿಃ 04/01/2022 |

ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದು ಅಮಾನತ್ತು ಮಹಜರ್ ಆಗಿದ್ದು ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿ ಬರೆದಂತಹ ವಿಚಾರಗಳು ಗೊತ್ತಿಲ್ಲ. ಸುಮಾರು 8 ವರ್ಷಗಳ ಹಿಂದೆ ಪೋಲಿಸರು ಠಾಣೆಯಲ್ಲಿ ನನ್ನ ಸಹಿ ಪಡೆದಿರುತ್ತಾರೆ. ಯಾವ ವಿಚಾರವಾಗಿ ಪೋಲಿಸರು ನನ್ನ ಸಹಿ ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪೋಲಿಸರು ನನ್ನನ್ನು ಯಾವ ಸ್ಥಳಕ್ಕೂ ಕರೆದುಕೊಂಡು ಹೋಗಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ. ಆರೋಪಿಯನ್ನು ನಾನು ಈ ಹಿಂದ ನೋಡಿಲ್ಲ. ಪ್ರಕರಣದ ಬಗ್ಗೆ ಮಾಹಿತಿ ಇಲ್ಲ. ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.
(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಶ್ರೀ. ಎ.ಪಿ.ಪಿ.ಯವರಿಂದಃ

ದಿನಾಂಕ 10.05.2013 ರಂದು ಬೆಳಗ್ಗೆ 10.15 ಗಂಟೆ ಸಮಯದಲ್ಲಿ ಆರ್.ಕೆ ಹೊಟೆಲ್ ಬಳಿ ಚಾಸಾ-8 ರವರಿಗೆ ಸೇರಿದ ಮಳಿಗೆಯಲ್ಲಿ ಆರೋಪಿತರು ಸಾರ್ವಜನಿಕರಿಗೆ ಸರ್ಕಾರದಿಂದ ಪಡಿತರ ಕಾರ್ಡಿಗೆ ವಿತರಣೆ ಮಾಡುವ ನೀಲಿ ಸೀಮೆಎಣ್ಣೆ ಯನ್ನು ಸಾರ್ವಜನಿಕರಿಂದ ಲೀಟರ್ ಗೆ 38 ರೂ ಗೆ ಖರೀದಿಸಿ , ಆರ್.ಕೆ ಹೊಟೆಲ್ ಊಟಕ್ಕೆ ಬರುವ ಲಾರಿಯವರಿಗೆ ಕಾಳಸಂತೆಯಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಲು 6 ಪ್ಲಾಸ್ಟಿಕ್ ಕ್ಯಾನುಗಳಲ್ಲಿ 210 ಲೀಟರ್ ನೀಲಿ ಸೀಮೆಎಣ್ಣೆ ಯಾವುದೇ ಲೈಸನ್ಸ್ ಪಡೆಯದೇ ಶೇಖರಿಸಿ ಇಟ್ಟಿದ್ದು ನಮ್ಮಗಳ ಸಮಕ್ಷಮ ಬೆಳಗ್ಗೆ 10.00 ಗಂಟೆಯಿಂದ 12.30 ಗಂಟೆಯವರೆಗೆ ಪೋಲಿಸರು ಅಮಾನತ್ತು ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಮ್ಮ ಸಮಕ್ಷಮ 750 ಎಂ.ಎಲ್. ನ ಗಾಜಿನ ಬಾಟಲಿಯಲ್ಲಿ ಸ್ಯಾಂಪಲ್ ಗಾಗಿ ಶೇಖರಿಸಿರುವ ನೀಲಿ ಸೀಮೆಎಣ್ಣೆ ಯನ್ನು 4 ಬಾಟಲುಗಳಲ್ಲಿ ತೆಗೆದಿರುತ್ತಾರೆ ಎಂದರೆ ಸರಿಯಲ್ಲ ಮತ್ತು 5 ಲೀಟರ್ ಕಬ್ಬಿಣದ ಒಂದು ಅಳತೆಯ ಮಾಪನ ಮತ್ತು ಕಬ್ಬಿಣದ

ಆಲಿಕೆಯನ್ನು ಒಂದು ಕಬ್ಬಿಣದ ಬಕೆಟ್ ಅನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಇದೇ ವಿಚಾರವಾಗಿ ದಿನಾಂಕ 10.11.2013 ರಂದು ಈಗ ಓದಿ ಹೇಳಿದಂತೆ ದಿನಾಂಕ 10.11.2013 ರಂದು - - - ನೋಡಿದರೆ ಗುರುತಿಸುತ್ತೇನೆ ಎಂದು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ತನ್ನ ಹೇಳಿಕೆ ಭಾಗವನ್ನು ಅಲ್ಲಗಳೆದ ಕಾರಣ ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಆರೋಪಿಯನ್ನು ಮತ್ತು ಮಾಲುಗಳನ್ನು ಘಟನಾ ಸ್ಥಳದಲ್ಲಿ ಪೋಲಿಸರು ನನ್ನ ಸಮಕ್ಷಮ ಅಮಾನತ್ತು ಮಹಜರ್ ಕ್ರಮ ಜರುಗಿಸಿ ಮತ್ತು ಆರೋಪಿಯನ್ನು ಪೋಲಿಸರು ಮತ್ತು ಆಹಾರ ಅಧಿಕಾರಿಗಳು ವಶಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಜೊತೆ ಚಾಸಾ-1, 2, 7 ಮತ್ತು 13 ರವರು ಹಾಜರಿದ್ದರು ಎಂದರೆ ಸರಿಯಲ್ಲ. ನನಗೆ ಪ್ರಕರಣದ ಆರೋಪಿ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಇಲ್ಲ ಎಂದು ತಿಳಿಸಿರುತ್ತಾರೆ.
ಮರು ವಿಚಾರಣೆ ಇಲ್ಲ,
ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ
ಸಹಿ/–
**1** ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ,
ನಂಜನಗೂಡು